**ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಘನ ನ್ಯಾಯಾಲಯ ಬ್ಯಾಡಗಿ.**
**ಕ್ರಿಮಿನಲ್ ಪ್ರಕರಣ ಸಂಖ್ಯೆ: 184/2023**

ಪಿಡಬ್ಲ್ಯೂ: 09

ಸಿಡಬ್ಲ್ಯೂ: 19

ಹೆಸರು : ಸಿ ಟಿ ಕರೆಕಲ್

ವಯಸ್ಸು : 53 ವರ್ಷ

ಉದ್ಯೋಗ : ಹೆಚ್ ಸಿ

ವಾಸಸ್ಥಳ : ಗುತ್ತಲ ಪೊಲೀಸಠಾಣೆ

ದಿನಾಂಕ : 21.06.2025 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ :**

ದಿನಾಂಕಃ 12.05.2023 ರಂದು ಚಾಸಾ-01 ರವರು ಠಾಣೆಗೆ ಬಂದು ದೂರನ್ನು ನೀಡಿದ್ದರ ಮೇರೆಗೆ ನಮ್ಮ ಠಾಣಾ ಗುನ್ನಾ ಸಂಖ್ಯೆ 79/2023 ಅಂತಾ ದಾಖಲಿಸಿಕೊಂಡು ಪ್ರ ವ ವರದಿಯನ್ನು ತಯಾರಿಸಿ ನ್ಯಾಯಾಲಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಚಾಸಾ-05 ರಿಂದ 09, 10, 11, 13, 14, 15 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಘಟನಾ ಸ್ಥಳದ ಪಂಚನಾಮೆಯನ್ನು ದಿನಾಂಕಃ 13.05.2023 ರಂದು ಚಾಸಾ-02 ಮತ್ತು 03 ರವರ ಸಮಕ್ಷಮ ಚಾಸಾ-07 ರವರ ಮಾಹಿತಿಯಂತೆ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು 12.15 ರಿಂದ 1.15 ರವರೆಗೆ ಮಾಡಿ ಭಾವಚಿತ್ರ ತೆಗೆದಿರುತ್ತೇನೆ. ಶವತನಿಖಾ ಪಂಚನಾಮೆಯನ್ನು ದಿನಾಂಕಃ 13.05.2023 ರಂದು ಚಾಸಾ-02 ಮತ್ತು 03 ರವರ ಸಮಕ್ಷಮ ಮಾಡಿ ಭಾವಚಿತ್ರ ತೆಗೆದಿರುತ್ತೇನೆ. ಸದರಿ ಪಂಚನಾಮೆಯನ್ನು ಮುಂಜಾನೆ 10.00 ರಿಂದ 11.00 ಘಂಟೆಯವರೆಗೆ ಮಾಡಿರುತ್ತೇನೆ. ಚಾಸಾ-14 ರವರ ಕಡೆಯಿಂದ ದೃಢೀಕರಣ ಪತ್ರವನ್ನು ಸ್ವೀಕರಿಸಿರುತ್ತೇನೆ. ನಿಪಿ-01 ರ ಮೇಲಿನ ತನ್ನ

ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-01(ಇ) ಎಂದು, ನಿಪಿ-07 ರ ಮೇಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-07(ಎ) ಎಂದು, ನಿಪಿ-10 ರ ಮೇಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-10(ಎ) ಎಂದು, ನಿಪಿ-13 ರ ಮೇಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-13(ಎ) ಎಂದು, ದೃಢೀಕರಣ ಪತ್ರವನ್ನು ನಿಪಿ-15 ಎಂದು, ಸಾಕ್ಷಿ ಸಹಿಯನ್ನು ನಿಪಿ-15(ಎ) ಎಂದು, ಪ್ರಥಮ ವರ್ತಮಾನ ವರದಿಯನ್ನು ನಿಪಿ-16 ಎಂದು, ಸಾಕ್ಷಿ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ನನ್ನ ತನಿಖಾಕಾಲದಲ್ಲಿ ಆರೋಪಿತನನ್ನು ನೋಡಿರುತ್ತೇನೆ. ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :</u>**

ಚಾಸಾ-09 ರವರು ಬರೆದುಕೊಟ್ಟ ಹಾಗೇ ಚಾಸಾ-01 ರವರು ದೂರನ್ನು ಕೊಟ್ಟಿದ್ದು ಅವರಿಗೆ ಯಾವುದೇ ಮಾಹಿತಿ ಇಲ್ಲಾ ಎಂದರೆ ಸರಿಯಲ್ಲಾ. ದೂರಿನಲ್ಲಿ ಬರೆದ ವಿಷಯ ಚಾಸಾ-01 ರವರಿಗೆ ಗೊತ್ತಿಲ್ಲಾ ಅಂದರೆ ಸರಿಯಲ್ಲಾ. ನಿಪಿ-01 ರಲ್ಲಿ ಇರುವ ಅಂಶಗಳನ್ನು ಚಾಸಾ-01 ರವರಿಗೆ ನಾನು ಓದಿ ಹೇಳಿಲ್ಲಾ ಅಂದರೆ ಸರಿಯಲ್ಲಾ. ಚಾಸಾ-01 ರವರು ನಿಪಿ-01 ರಲ್ಲಿ ಇರುವ ವಿಷಯ ಎಂದೂ ಒಪ್ಪಿಲ್ಲಾ ಅಂದರೆ ಸರಿಯಲ್ಲಾ. ನಿಪಿ-07, 10 ರಲ್ಲಿ ಪಂಚರಿಗೆ ಯಾವುದೇ ವಿಷಯ ಗೊತ್ತಿಲ್ಲಾ ಹಾಗೂ ಅವರನ್ನು ಕೇವಲ ನಿಲ್ಲಿಸಿ ಭಾವಚಿತ್ರ ತೆಗೆದಿದ್ದೇವೆ ಅಂದರೆ ಸರಿಯಲ್ಲಾ. ನನ್ನ ಸಮಕ್ಷಮ ಯಾವುದೇ ಸಾಕ್ಷಿದಾರರು ಹೇಳಿಕೆ ನೀಡಿಲ್ಲಾ ಅಂದರೆ ಸರಿಯಲ್ಲಾ. ನನ್ನ ಸಮಕ್ಷಮ ನಿಪಿ-02 ರಿಂದ 06 ರಂತೆ ಸಾಕ್ಷಿದಾರರು ಯಾವುದೇ ಹೇಳಿಕೆ ನೀಡಿಲ್ಲಾ ಎಂದರೆ ಸರಿಯಲ್ಲಾ. ಆರೋಪಿತನು ಯಾವುದೇ ತಪ್ಪು ಮಾಡದೆ ಇದ್ದರೂ ಸಹ ಚಾಸಾ-09 ರವರ ಮಾತುಕೇಳಿ ಸುಳ್ಳು ದೂರನ್ನು ಸ್ವೀಕರಿಗೆ ಸುಳ್ಳು ತನಿಖೆಮಾಡಿದ್ದೇನೆ ಅಂದರೆ ಸರಿಯಲ್ಲಾ. ನಾನು ತನಿಖೆಕಾದಲ್ಲಿ ಈ

ಪ್ರಕರಣಕ್ಕೆ ಅನುಕುಲವಾಗಲು ಚಾಸಾ–04 ರಿಂದ 11 ರವರ ಹೇಳಿಕೆಗಳನ್ನು ನಾನೇ ಬರೆದುಕೊಂಡಿದ್ದೇನೆ ಅಂದರೆ ಸರಿಯಲ್ಲಾ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೆ ಕೆ ಸ ಅದೆ.

Sd/-
ಜೆಎಂಎಫ್‌ಸಿ, ಬ್ಯಾಡಗಿ.